**ದಿನಾಂಕ:31.3.2014ರ ಅಂತ್ಯಕ್ಕೆ ಅವಧಿ ಮುಗಿಯಲಿರುವ ಮಾಧ್ಯಮಿಕ (Secondary Societies) ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ – ಹಂತ ಹಂತವಾಗಿ ನಿಯಮಾನುಸಾರ ಜಿಲ್ಲಾ ಚುನಾವಣಾಧಿಕಾರಿಯು ಕ್ರಮವಿಡುವ ಬಗ್ಗೆ ಚೆಕ್‌ಲಿಸ್ಟ್**

**ಚೆಕ್‌ಲಿಸ್ಟ್**

ಉಲ್ಲೇಖ:– ಆಯೋಗದ ಅಧಿಸೂಚನೆ:ಸಚುಆ/46/ಚುನಾವಣೆ/ಅಸೂ/2013–14, ದಿನಾಂಕ:16.01.2014

| ಕ್ರಸಂ | ವಿವರ | ಷರಾ |
|---|---|---|
| 1 | ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗಧಿಪಡಿಸಿರುವುದು (ದಿನಾಂಕ: 16.01.2014ರ ಆಯೋಗದ ಅಧಿಸೂಚನೆಯಂತೆ) | ದಿನಾಂಕ:19.04.2014 ರಿಂದ ದಿನಾಂಕ:21.04.2014ರ ವರೆಗಿನ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸುವ ಯಾವುದೇ ದಿನಾಂಕ ಚುನಾವಣೆ ನಿಗಧಿಪಡಿಸತಕ್ಕದ್ದು. |
| 2 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡುಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಮಾಧ್ಯಮಿಕ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರು ಜಿಲ್ಲಾ ಚುನಾವಣಾಧಿಕಾರಿಗೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಠ 60 ದಿನಗಳ ಮುಂಚಿತವಾಗಿ ಸಲ್ಲಿಸುವಿಕೆ ಬಗ್ಗೆ.<br>[ ಕರ್ನಾಟಕ ಸಹಕಾರ ಸಂಘಗಳ ನಿಯಮ 1960 ರ ನಿಯಮ 13ಡಿ (4) ಮತ್ತು (5) ಮತ್ತು ಸೌಹಾರ್ದ ಸಹಕಾರಿ ನಿಯಮ 5ಬಿ (1) & (2)ರಂತೆ | ದಿನಾಂಕ:17.02.2014 ರಿಂದ ದಿನಾಂಕ:19.02.2014ರ ವರೆಗಿನ ಅವಧಿಯಲ್ಲಿ ನಿಗಧಿಪಡಿಸಿದ ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಠ 60 ದಿನಗಳ ಮುಂಚೆ ಜಿಲ್ಲಾ ಚುನಾವಣಾಧಿಕಾರಿಗೆ ಸಂಘದ ಮುಖ್ಯ ಕಾರ್ಯನಿರ್ವಾಹಕರು ನಿಯಮಾನುಸಾರ ಸಲ್ಲಿಸಬೇಕಾಗಿರುತ್ತದೆ. |
| 3 | ಮೇಲೆ ನಮೂದಿಸಲಾದ ಕಂಡಿಕೆ (2) ರಲ್ಲಿ ವಿವರಿಸಿರುವಂತೆ ಕರಡು ಮತದಾರರ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯು (ಡಿ.ಇ.ಓ) ಪ್ರಕಟಿಸಬೇಕಾಗಿರುತ್ತದೆ.<br>[ ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ(3) (ಎ) ಮತ್ತು ಸೌಹಾರ್ದ ನಿಯಮ 5(ಬಿ) (5) (ಬಿ) ಗಳನ್ವಯ] | ದಿನಾಂಕ:04.03.2014 ರಿಂದ ದಿನಾಂಕ:06.03.2014 ರ ವರೆಗಿನ ಅವಧಿಯಲ್ಲಿ ನಿಗಧಿಪಡಿಸಿದ ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚೆ ಪ್ರಕಟಿಸತಕ್ಕದ್ದು. |

------2

| | | |
|---|---|---|
| 4 | ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವುದು. [ ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ(3)(ಬಿ) ಮತ್ತು ಸೌಹಾರ್ದ ಸಹಕಾರಿ ನಿಯಮ 5ಬಿ(6)] ಅಂತಿಮ ಮತದಾರರ ಪಟ್ಟಿಯು ಮಾಧ್ಯಮಿಕ ಸಹಕಾರ ಸಂಘದ ಸಂಬಂಧದಲ್ಲಿ, ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರು ಮತ್ತು ಸದಸ್ಯ ಸಂಘಗಳ ಡೆಲಿಗೇಟ್‌ಗಳ ವಿವರಗಳನ್ನು ಒಳಗೊಂಡಿರತಕ್ಕದ್ದು. | ದಿನಾಂಕ:03.04.2014 ರಿಂದ ದಿನಾಂಕ:05.04.2014 ರ ವರೆಗಿನ ಅವಧಿಯಲ್ಲಿ ನಿಗಧಿಪಡಿಸಿದ ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 5 | ಸಹಕಾರ ಚುನಾವಣಾ ಆಯೋಗವು ಮಾಧ್ಯಮಿಕ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ನಿಗಧಿಪಡಿಸಿರುವ ಅಧಿಸೂಚನೆಯಂತೆ, ನಿಯಮ 14ರಂತೆ ಜಿಲ್ಲಾ ಚುನಾವಣಾಧಿಕಾರಿಯು ನಮೂನೆ XI ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ. | ಜಿಲ್ಲಾ ಚುನಾವಣಾಧಿಕಾರಿಯು ಕರ್ನಾಟಕ ಸಹಕಾರ ಸಂಘಗಳ ನಿಯಮ 14 ರನ್ವಯ ಸಾಮಾನ್ಯ ಚುನಾವಣಾ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 6 | ಕಂಡಿಕೆ 5 ರಲ್ಲಿ ವಿವರಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯು ಅಧಿಸೂಚನೆ ಹೊರಡಿಸಿದ ನಂತರ ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿ ನಮೂನೆ XII ರಲ್ಲಿ ಸಾರ್ವಜನಿಕ ನೋಟೀಸ್ ನೀಡುವಿಕೆ. | ನಿಯಮ 14 (3) ರಂತೆ ರಿಟರ್ನಿಂಗ್ ಅಧಿಕಾರಿಯು ಅಗತ್ಯ ಕ್ರಮವಿಡುವ ಬಗ್ಗೆ ನಿರ್ದೇಶಿಸುವುದು. |
| 7 | ಮಾಧ್ಯಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಪದಾಧಿಕಾರಿಗಳ ಮೊದಲ 2 1/2 ವರ್ಷದ ಅವಧಿ ಮುಗಿದಿರುವ / ಮುಗಿಯಲಿರುವ ಪ್ರಕರಣಗಳು ಕಂಡು ಬಂದಲ್ಲಿ 2ನೇ ಎರಡೂವರೆ ವರ್ಷದ ಅವಧಿಗೆ ಚುನಾವಣೆ ನಡೆಸಲು ಬಾಕಿ ಇರುವ ಸಂಘಗಳ ಬಗ್ಗೆ ಪರಿಶೀಲಿಸಿ ರಿಟರ್ನಿಂಗ್ ಅಧಿಕಾರಿ ನೇಮಕಾತಿ ಅವಶ್ಯಕತೆ ಇದ್ದಲ್ಲಿ ವಿವರಗಳೊಡನೆ ವರದಿ ಸಲ್ಲಿಸುವುದು. | ಈ ವಿಷಯದ ಬಗ್ಗೆ ಜಿಲ್ಲಾವಾರು ಮಾಹಿತಿ ಪಡೆದು ಆಯೋಗಕ್ಕೆ ಕಳುಹಿಸಿಕೊಡಲು ಕೂಡಲೇ ಅಗತ್ಯ ಕ್ರಮವಿಡುವುದು. |
| 8 | ಆಕಸ್ಮಿಕ ತೆರವಾದ ನಿರ್ದೇಶಕರ /ಪದಾಧಿಕಾರಿಗಳ ಚುನಾವಣೆ. | ಇಂತಹ ಪ್ರಕರಣಗಳಿದ್ದಲ್ಲಿ ಪರಿಶೀಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿಗೆ ಅಗತ್ಯ ಕ್ರಮ ಕೈಗೊಂಡು ಆಯೋಗಕ್ಕೆ ವರದಿ ಸಲ್ಲಿಸುವುದು. |
| 9 | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು | ರಿಟರ್ನಿಂಗ್ ಅಧಿಕಾರಿಯು, ಡಿ.ಇ.ಓ ರವರೊಡನೆ ಸಮಾಲೋಚಿಸಿ ಸೂಕ್ತವಾದ ಮತದಾನ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಮಾಡುವುದು. |
| 10 | ಮತದಾನ ಸಿಬ್ಬಂದಿ ನೇಮಕಾತಿ | ಕರ್ನಾಟಕ ಸಹಕಾರ ಸಂಘಗಳ ನಿಯಮ 13(ಎಫ್)ನ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಅಧ್ಯಕ್ಷಾಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಮತದಾನ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಗಳನ್ನು ನೇಮಕ ಮಾಡಬಹುದು. |
| 11 | ಚುನಾವಣೆ ನಡೆಸುವ ಸಂಬಂಧ ಅಧಿಕಾರಿ / ಚುನಾವಣಾ ಸಿಬ್ಬಂದಿಗಳಿಗೆ ತರಬೇತಿ ವ್ಯವಸ್ಥೆ | ಆಯೋಗವು ಈಗಾಗಲೇ ಚುನಾವಣಾ ಕೈಪಿಡಿಯನ್ನು ಒದಗಿಸಿದೆ. ಅಧಿನಿಯಮ / ನಿಯಮಗಳು /ಬೈಲಾ ಅವಕಾಶಗಳ ಸಂಬಂಧ ಸಿಬ್ಬಂದಿಗೆ ಸೂಕ್ತ ತಿಳುವಳಿಕೆ ನೀಡಲು ತರಬೇತಿಗೆ ಅಗತ್ಯ ವ್ಯವಸ್ಥೆ ಮಾಡುವುದು. |

| | | |
|---|---|---|
| 12 | ಚುನಾವಣಾ ಫಲಿತಾಂಶ ಘೋಷಣೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ರಿಟರ್ನ್‌ಗಳನ್ನು ಸಲ್ಲಿಸುವುದು. | ನಿಯಮ 14ವೈ(2) ರನ್ವಯ ರಿಟರ್ನಿಂಗ್ ಅಧಿಕಾರಿ ಕ್ರಮವಿಡುವ ಕುರಿತು ಸೂಚಿಸುವುದು. |
| 13 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ, ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ, ಹಾಗೂ ವಿಲೇವಾರಿ | ನಿಯಮ 14ಎಬಿ ಮತ್ತು ನಿಯಮ 14ಎಸಿ ಹಾಗೂ 14ಎಡಿ ಗಳ ಅವಕಾಶದಂತೆ ಹಾಗೂ ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಿರುವಂತೆ ಕ್ರಮವಿಡುವಂತೆ ನೋಡಿಕೊಳ್ಳುವುದು. |
| 14 | ಪದಾಧಿಕಾರಿಗಳ ಚುನಾವಣೆ | ನಿಯಮ ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಜಿ ದ ಅವಕಾಶದಂತೆ ಕ್ರಮವಿಡುವುದು. |
| 15 | ಮಾದರಿ ನೀತಿ ಸಂಹಿತೆ | ಆಯೋಗವು ಈಗಾಗಲೇ ಹೊರಡಿಸಿರುವ ನೀತಿ ಸಂಹಿತೆ ಪಾಲನೆ ಬಗ್ಗೆ ಅಗತ್ಯ ಕ್ರಮವಿಡುವುದು. |

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**